## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ವಾರ್ಡ್ ಸದಸ್ಯರ ಸಮಿತಿ ವಾರ್ಡ್ ಸಂಖ್ಯೆ: 89- ಜೋಗುಪಾಳ್ಯ ನಡೆದ ಸಮೀಪಿಕರಣ(ZOOM) ದಿನಾಂಕ: 22-06-2021 ರಂದು ನಡೆದ ಸಭೆಯ ನಡವಳಿಗಳು

ಮಾನ್ಯ ಆಯುಕ್ತರು ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಐ12(5)ಪಿಆರ್/35/ 2020-21/21-09-2020 ರ ಆದೇಶದಂತೆ ದಿನಾಂಕ: 22-06-2021 ರಂದು ನಡೆದ ಸಮೀಪಿಕರಣ(ZOOM) ವಾರ್ಡ್ ಸಮಿತಿ ಸಭೆಯ ನಡವಳಿಗಳು,

**ಸಭೆಗೆ ಹಾಜರಿದ್ದವರ ವಿವರಗಳು**

1) ಶ್ರೀ.ಬಿ ಮಹೇಶ್ ಕುಮಾರ್, ನೋಡಲ್ ಅಧಿಕಾರಿ, ಸಹಾಯಕ ನಿಯಂತ್ರಕರು ಹಣಕಾಸು (ಪೂರ್ವ),
2) ಸಹಾಯಕ ಅಭಿಯಂತರರು ಬೆಸ್ಕಾಂ ಹಾಗೂ ಡಾ॥ ಕಿಷೋರ್ ವೈದ್ಯಕೀಯ ಅಧಿಕಾರಿ ಬಿಬಿಎಂಪಿ, ಶ್ರೀಕಾಂತ್ ಕಿರಿಯ ಆರೋಗ್ಯ ಪರಿವೀಕ್ಷಕರು ಹಾಜರಿದ್ದರು.
3) ವಾರ್ಡ್ ಸಮಿತಿ ಸದಸ್ಯರಾದ, ಶ್ರೀ.ರಮೇಶ್ ರೆಡ್ಡಿ, ಶ್ರೀ.ಆಶಾ, ಅಲ್ವಿನ್, ಶ್ರೀ. ಉಮೇಶ್, ಹಾಗೂ ಶ್ರದ್ಧ, ಅನೀಲ್ ಗುಬ್ಬಿ, ಸಿಂದೂಜಾ ಅಯ್ಯಂಗಾರ್) ರವರು ಸಮೀಪಿಕರಣ (ZOOM) ಸಭೆಗೆ ಹಾಜರಿದ್ದರು,

ಸಭೆಯನ್ನು ಪ್ರಾರಂಭಿಸುತ್ತಾ ಮೊದಲನೆಯದಾಗಿ ನೋಡಲ್ ಅಧಿಕಾರಿಯವರು ಹಾಜರಿದ್ದ ಅಧಿಕಾರಿಗಳನ್ನು ಹಾಗೂ ವಾರ್ಡ್ ಸಮೀತಿ ಸದಸ್ಯರು, ಅಹ್ವಾನಿತರಾಗಿದ್ದ ಸ್ಥಳೀಯ ನಾಗರೀಕರಿಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಲಾಯಿತು.

**ವಾರ್ಡ್ ಸದಸ್ಯರ ಸಮೀತಿ ಸಭೆಯಲ್ಲಿ ಚರ್ಚಿಸಿದಂತಹ ವಿಷಯಗಳು ;-**

1) ಮೋದಲನೆದಾಗಿ ನೋಡಲ್ ಅಧಿಕಾರಿ ರವರು ಸಹಾಯ ಅಭಿಯಂತರರು ಬೇಸ್ಕಾಂ ರವರಿಗೆ ಜಿ ಸ್ಟ್ರೀಟ್ ಮೂರನೆ ಮತ್ತು ನಾಲ್ಕನೇ ಕ್ರಾಸ್‌ನಲ್ಲಿ ವಾಲಿರುವ ವಿದ್ಯುತ್ ಕಂಭವನ್ನು ಸರಿಪಡಿಸಲಾಗಿದೆಯೇ ಎಂದು ಕೇಳಿದರು ಅದಕ್ಕೆ ಉತ್ತರವಾಗಿ ಸಹಾಯಕ ಅಭಿಯಂತರರು ರವರು ಬೆಸ್ಕಾಂ ಈಗಾಗಲೇ ಸರಿಪಡಿಸಲಾಗಿದೆ ಎಂದು ಹೇಳಿದರು. ವಾರ್ಡ್ ಸಮೀತಿ ಸದಸ್ಯರಾದ ಉಮೇಶ್ ರವರು ಲಿಂಗಯ್ಯನಪಾಳ್ಯ 3ನೇ ಕ್ರಾಸ್‌ನಲ್ಲಿರುವ ವಿದ್ಯುತ್ ಕಂಭವನ್ನು ಬದಲಾಯಿಸುವಂತೆ ಸಹಾಯಕ ಅಭಿಯಂತರರು ಬೆಸ್ಕಾಂ ರವರಿಗೆ ಕೇಳಿದಾಗ ಬೆಸ್ಕಾಂ ಅಧಿಕಾರಿ ಉತ್ತರಿಸುತ್ತಾ ಸ್ಥಳ ಪರಿವಿಕ್ಷನೆ ಮಾಡಿ ಶಿಘ್ರದಲ್ಲಿ ಅನುದಾನದ ನಂತರ ಬದಲಾಯಿಸಲಾಗುವುದು ಎಂದು ಹೇಳಿದರು.

2) ನೋಡಲ್ ಅಧಿಕಾರಿಯವರು ಡಾ|| ಕಿಷೋರ್ ಆರೋಗ್ಯಾಧಿಕಾರಿ ಜೋಗೂಪಾಳ್ಯ ರವರಿಗೆ ಪ್ರಸ್ತುತ ವಾರ್ಡಿನಲ್ಲಿ ಎಷ್ಟು ಹೋಂ ಐಷೋಲೆಷನ್ ಕೋವಿಡ್-19 ಸೋಂಕಿತರಿದ್ದಾರೆಂದು ವಿಚಾರಿಸಲಾಗಿ ಸುಮಾರು 10 ಜನರು ಇದ್ದಾರೆಂದು ಹಾಗೂ ಡಾ|| ಹರ್ಷ ರವರು ಕೋವಿಡ್ ಸೋಂಕಿತರು ಹೋಂ ಐಷೋಲೆಷನ್ ಇರುವವರನ್ನು ಅವಶ್ಯಕತೆ ಇದ್ದಾಗ ಕೋವಿಡ್ ಕೇರ್ ಸೆಂಟರ್ Prime Rose ಗೆ ಅಡ್ಮಿಟ್ ಮಾಡಿಕೊಳ್ಳುವುದು ಹಾಗೂ ಮೇಲುಸ್ತುವಾರಿಯನ್ನು ನೋಡಿಕೊಳ್ಳುತ್ತಾರೆ ಎಂದು ಆರೋಗ್ಯಾಧಿಕಾರಿ ಉತ್ತರಿಸಿದರು.

3) ವಾರ್ಡಿನ ಸಾರ್ವಜನಿಕರಿಗೆ ವ್ಯಾಕ್ಸಿನೇಷನ್ ನೀಡುವ ಬಗ್ಗೆ ಈ ಕೆಳಕಂಡಂತೆ ಚರ್ಚಿಸಲಾಯಿತು.

a) ಸಾರ್ವಜನಿಕರಿಗೆ ವ್ಯಾಕ್ಸಿನ್ ಬಗ್ಗೆ ಅರಿವುಮೂಡಿಸುವ ಸಲುವಾಗಿ ಆಟೋ ಹಾಗೂ ಇತರ ಮಾಧ್ಯಮಗಳಲ್ಲಿ ಪ್ರಚಾರ ಪಡಿಸುವುದು.

b) ವಾರ್ಡಿನಲ್ಲಿ ಮೊಬೈಲ್ ವ್ಯಾಕ್ಸಿನೇಷನ್ ನಡೆಸುವ ಬಗ್ಗೆ ಚರ್ಚಿಸಲಾಯಿತು.

c) ವಾರ್ಡಿನ ಸ್ಲಂನಲ್ಲಿರುವ ಸಾರ್ವಜನಿಕರಿಗೆ ವ್ಯಾಕ್ಸಿನೇಷನ್ ಬಗ್ಗೆ ಅರಿವುಮೂಡಿಸಿ ಹೆಚ್ಚು ಹೆಚ್ಚು ವ್ಯಾಕ್ಸಿನೇಷನ್ ಸಾರ್ವಜನಿಕರಿಗೆ ನೀಡುವ ಬಗ್ಗೆ ಚರ್ಚಿಸಲಾಯಿತು.

d) ವಾರ್ಡಿಗೆ ಕೇಂದ್ರ ಸ್ಥಳದಿಂದ ಹೆಚ್ಚು ವ್ಯಾಕ್ಸಿನೇಷನ್ ತರಿಸಿಕೊಳ್ಳುವ ಬಗ್ಗೆ.

ಅಂತಿಮವಾಗಿ ಮೇಲ್ಕಂಡ ಎಲ್ಲಾ ವಿಷಯಗಳನ್ನು ಚರ್ಚಿಸಲಾಗಿ ಹಾಗೂ ಚರ್ಚಿಸಿದ ವಿಷಯಗಳ ಬಗ್ಗೆ ಅಧಿಕಾರಿಗಳು ಮುಂದಿನ ವಾರ್ಡ್ ಸಮಿತಿ ಸಭೆಗೆ ಸಂಬಂಧಪಟ್ಟ ಅಧಿಕಾರಿಗಳು ಕೈಗೊಂಡ ಕ್ರಮದ ವರದಿಯನ್ನು ನೀಡಲು ಸೂಚಿಸಿ, ಸಭೆಯನ್ನು ಮುಕ್ತಾಯಗೊಳಿಸಿದರು.

**ನೋಡಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ-89- ಜೋಗುಪಾಳ್ಯ**
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

<u>ಪ್ರತಿಯನ್ನು</u>

1) ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗಾಗಿ ಸಲ್ಲಿಸಿದೆ.
2) ಜಂಟಿ ಆಯುಕ್ತರು (ಪೂರ್ವ) ರವರ ಮಾಹಿತಿಗಾಗಿ ಕಳುಹಿಸಿಕೊಡಲಾಗಿದೆ.
3) ವಾರ್ಡ್ ಸಮಿತಿಯ ಅಧ್ಯಕ್ಷರ ಮಾಹಿತಿಗಾಗಿ ಕಳುಹಿಸಿದೆ.
4) ಮಾನ್ಯ ಕೌನ್ಸಿಲ್ ಕಾರ್ಯದರ್ಶಿಯವರಿಗೆ ಕಳುಹಿಸಿದೆ.
5) ವಾಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
6) ಕಛೇರಿ ಪ್ರತಿ